ಗೊತ್ತಿಲ್ವಾ? ಇಲ್ ನೆಗಾಡೋದು ನಾವ್ ಮಾತ್ರ, ನೀವು ಮುಚ್ಕೊಂಡ್ ನಿಂತಿರ್ಬೇಕು, ಇಲ್ಲ ಅಂದ್ರೆ ಬಾಲ ಕಟ್ ಮಾಡ್ತೀವಿ ಹುಷಾರ್' ಎಂದು ಅಬ್ಬರಿಸಿದ. ಆ ಸದ್ದಿಗೆ ಜ್ಯೂನಿಯರುಗಳ ಜೊತೆಗೆ ಸೀನಿಯರುಗಳೂ ಒಮ್ಮೆಗೇ ನಗುವನ್ನು ನಿಲ್ಲಿಸಿದರು. ಐವತ್ತು ಜನರಿರುವ ಆ ಕೋಣೆಯಲ್ಲಿ ಉಸಿರಾಟವೂ ಕೇಳದಂತಹ ನಿಶ್ಶಬ್ದ ಸೃಷ್ಟಿಯಾಯಿತು.

'ಏನೋ ನಿನ್ ಹೆಸ್ರು?' ಎಂಬ ಒಂದು ಸದ್ದು ಎಲ್ಲಾ ಜ್ಯೂನಿಯರುಗಳ ಕಿವಿಗೂ ಅಪ್ಪಳಿಸಿದರೂ ತಲೆ ತಗ್ಗಿಸಿದ್ದ ಯಾರಿಗೂ ತಲೆಯೆತ್ತಿ ಆ ಪ್ರಶ್ನೆ ತನಗೇ ಕೇಳಿದ್ದಾ ಎಂದು ಪರೀಕ್ಷಿಸುವ ಧೈರ್ಯವಿರಲಿಲ್ಲ. 'ಅವತ್ ನನ್ ಹತ್ರ ಡ್ರಾಪ್ ತಗೊಂಡ್ಯಲ್ಲ ಕಡ್ಡಿ ಪೈಲ್ವಾನ್, ನಿಂಗೇ ಕೇಳ್ತಿರೋದು' ಎಂದಾಗ ಸಂದೀಪ ನಡುಗುತ್ತಲೇ ತಲೆಯೆತ್ತಿದ. ಅರಿಹಂತ್ ಅವನತ್ತಲೇ ದುರುಗುಟ್ಟಿಕೊಂಡು ನೋಡುತ್ತಾ 'ಬೈಕ್ ಇಳ್ದೋನು ಏನೋ ಅಂದೆ?' ಎಂದು ಕೇಳಿದ. ಸಂದೀಪನ ಬಾಯಿಯಿಂದ ಮಾತೇ ಹೊರಡಲಿಲ್ಲ. ಅರಿಹಂತ್ ಸುತ್ತಲೂ ಇರುವ ಸೀನಿಯರುಗಳ ಕಡೆಗೆ ನೋಡುತ್ತಾ 'ಥ್ಯಾಂಕ್ಸ್ ಅರಿಹಂತ್ ಅಂತೆ ಕಣ್ರೋ. ಹಾಸ್ಟೆಲ್ಲಿಗ್ ಕಾಲಿಟ್ಟು ಒಂದ್ ತಿಂಗ್ಳಾಗಿಲ್ಲ, ಆಲ್ರೆಡಿ ಸೀನಿಯರ್ರಿಗೆ ಏಕವಚನ! ಬಿಟ್ರೆ ನನ್ ಚಡ್ಡೀಲಿ ಕಾಲ್ ಹಾಕ್ತಾನೆ ಇವ್ನು' ಎಂದ. ಎಲ್ಲರೂ ಜೋರಾಗಿ ನಕ್ಕರು. ಈ ಬಾರಿ ಜ್ಯೂನಿಯರುಗಳು ಯಾರೂ ನಗುವ ಸಾಹಸ ಮಾಡಲಿಲ್ಲ.

ಸಂದೀಪ ಅಳುವಿಗೆ ಅತ್ಯಂತ ಹತ್ತಿರದಲ್ಲಿದ್ದ. ಎಲ್ಲರ ನಗು ನಿಂತ ಮೇಲೆ ಅರಿಹಂತ್ 'ನೋಡಿ, ನಿಮಗ್ ಬೇಕಾದಂಗ್ ಇರಕ್ಕೆ ಇದು ನಿಮ್ ಮನೆ ಅಲ್ಲ, ಹಾಸ್ಟೆಲ್ಲು. ಇಲ್ಲಿ ಒಂದಷ್ಟು ರೂಲ್ಸ್ ಇದಾವೆ, ಅದನ್ನ ಫಾಲೋ ಮಾಡ್ಬೇಕು, ಸೀನಿಯರ್ರು ಏನೇ ಕೆಲಸ ಹೇಳಿದ್ರೂ ಮಾಡ್ಬೇಕು, ಸೀನಿಯರ್ರು ಕೂಗಿದ್ ತಕ್ಷಣ ಬರ್ಬೇಕು, ಸೀನಿಯರ್ರಿಗೆ ಉಲ್ಟಾ ಮಾತಾಡ್ಬಾರ್ದು, ಎಲ್ಲಾವ್ದಕ್ಕಿಂತ ಇಂಪಾರ್ಟೆಂಟು ಏನ್ ಗೊತ್ತಾ?... ಏನ್ ಗೊತ್ತೇನೋ ಕಡ್ಡಿ ಪೈಲ್ವಾನ್?' ಎಂದ. ಸಂದೀಪ ತಲೆ ಎತ್ತಲಿಲ್ಲ. ಅರಿಹಂತ ಮುಂದುವರಿಸಿ, 'ನೀವ್ಯಾರೂ ಸೀನಿಯರ್ರಿಗೆ ಹೆಸ್ರು ಹಿಡ್ದು ಕರಿಯೋ ಹಂಗಿಲ್ಲ, 'ಅಣ್ಣಾ' ಅನ್ಬೇಕು, ಏನ್ ಅನ್ಬೇಕು?' ಎಂದಾಗ ಎಲ್ಲಾ ಜ್ಯೂನಿಯರ್ರೂ ನಿಧಾನದ ಧ್ವನಿಯಲ್ಲಿ 'ಅಣ್ಣಾ...' ಎಂದರು. 'ನೀವೆಲ್ಲಾ ಸುಮ್ನಿರ್ರೋ, ನೀನೊಬ್ನೇ ಹೇಳೋ, ಹೆಂಗ್ ಕರೀತೀಯಾ ನಂಗೆ?' ಎಂದು ಅರಿಹಂತ ಸಂದೀಪನ ಕಡೆಗೆ ದಿಟ್ಟಿಸಿದ. ಸಂದೀಪ ಒತ್ತರಿಸಿ ಬರುತ್ತಿದ್ದ ಅಳುವನ್ನು ಕಷ್ಟಪಟ್ಟು ತಡೆದುಕೊಂಡು 'ಅಣ್ಣಾ' ಎಂದ. ಅರಿಹಂತ ತನ್ನ ಪ್ರಭುತ್ವ ಸ್ಥಾಪನೆಯಾದ ಖುಷಿಯಲ್ಲಿ ಮುಗುಳ್ನಕ್ಕು 'ಎಲ್ಲರಿಗೂ ಬಿಸಿನೀರ್ ಸಿಗ್ತಾ ಇದ್ಯಾ ಸ್ನಾನಕ್ಕೆ?' ಎಂದು ಸಮಾಧಾನದಲ್ಲಿಯೇ ಕೇಳಿದ. ಎಲ್ಲಾ ಜ್ಯೂನಿಯರುಗಳೂ ಹೂಂ ಎನ್ನುವಂತೆ ತಲೆ ಅಲ್ಲಾಡಿಸಿದರು. 'ಒಲೆ ಉರಿ ಹಾಕ್ತಾ ಇರೋರ್ ಯಾರು?' ಎಂಬ ಪ್ರಶ್ನೆ ಹಿಂದೆಯೇ ತೂರಿ ಬಂತು. ಬೆಳಗ್ಗೆ ಅಲಾರಾಂ ಸದ್ದಿಗೆ ಎದ್ದು ಅರೆನಿದ್ರೆಯಲ್ಲಿಯೇ ಬಕೆಟ್ ಹಿಡಿದುಕೊಂಡು ಹೋಗಿ ನಲ್ಲಿಯಲ್ಲಿ ಬಿಸಿಬಿಸಿಯಾಗಿ ಬರುತ್ತಿದ್ದ ನೀರು ಹಿಡಿದುಕೊಂಡು ಸ್ನಾನ ಮಾಡುತ್ತಿದ್ದರೇ ಹೊರತು ಯಾರೂ ಈ ನೀರಿನ ಬಿಸಿಯ ಮೂಲ ಯಾವುದು ಎಂದು ಆ ಎರಡು ವಾರದಲ್ಲಿ ಒಮ್ಮೆಯೂ ಯೋಚಿಸಲು ಹೋಗಿರಲಿಲ್ಲ. ತಪ್ಪಿತಸ್ಥ ಭಾವದಲ್ಲಿ ಜ್ಯೂನಿಯರುಗಳ ಕುತ್ತಿಗೆಗಳು ಮತ್ತಷ್ಟು ಬಾಗಿದವು. ಅರಿಹಂತ್ ಮುಂದುವರಿಸಿ 'ತಿಂದ, ಮಲಗ್ದ, ಹೇತ ಅಂತಿರಕ್ಕೆ ಹಾಸ್ಟೆಲೇನು ನಿಮ್ ಮಾವಂದಾ? ಮುಚ್ಕೊಂಡು ಬೆಳಗ್ಗೆ ಬೇಗ ಎದ್ದು ಒಲೆ ಉರಿ ಹಾಕ್ಬೇಕು, ನಾವೆಲ್ಲಾ ಒಂದೊಂದ್ ವರ್ಷ ಒಲೆ ಉರಿ ಹಾಕೇ ಸೀನಿಯರ್ಸ್ ಆಗಿರೋದು, ನಾಳೆಯಿಂದ ಒಲೆ ಉರಿ ಜವಾಬ್ದಾರಿ ನಿಮ್ದು. ದಿನಾ ಒಬ್ಬೊಬ್ರು ಅಂತ ನೀವೇ ಡಿವೈಡ್ ಮಾಡ್ಕೊಳಿ. ಒಟ್ನಲ್ಲಿ 7 ಗಂಟೆಗ್ ನಲ್ಲಿ ತಿರುಗ್ಸಿದ್ರೆ ಬಿಸಿ ನೀರ್ ಬರ್ಬೇಕು ಅಷ್ಟೇ' ಎಂದ. ಜ್ಯೂನಿಯರುಗಳು ಮತ್ತೆ ತಲೆ ಅಲ್ಲಾಡಿಸಿದರು. ಅರಿಹಂತ್ ಪಕ್ಕಕ್ಕೆ ತಿರುಗಿ 'ಡ್ಯಾನ್ಸ್ ಮಾಡ್ಸಣ್ವಾ, ಇವತ್ತೇ?' ಎಂದು ಕೇಳಿದ. ಉಳಿದ ಸೀನಿಯರುಗಳಲ್ಲಿ ಯಾರೋ ಒಬ್ಬ 'ನೆಕ್ಸ್ಟ್ ಟೈಮ್ ಮಾಡಣ, ಓವರ್‌ಡೋಸ್ ಆಗುತ್ತೆ' ಎಂದಿದ್ದು ಕೇಳಿ ಅರಿಹಂತ್ ಜ್ಯೂನಿಯರುಗಳತ್ತ ತಿರುಗಿ, 'ಎಲ್ಲಾ ನಿಮ್ ಹೆಸ್ರು, ಊರು, ಬ್ರಾಂಚು ಹೇಳ್ಬಿಟ್ಟು ಊಟಕ್ ಹೋಗಿ, ಏ ಕಡ್ಡಿ ಪೈಲ್ವಾನ್ ನೀನ್ ಮಾತ್ರ ಒಂದ್ ಸಾಂಗಿಗ್ ಡ್ಯಾನ್ಸ್ ಮಾಡ್ತೀಯಾ ಇವತ್ತು' ಎಂದ.

ಅವತ್ತು ಕಿರೇಮಗಳೂರಿನ ವಾಸ್ತವ್ಯದಲ್ಲಿ ಮೊದಲನೇ ಬಾರಿಗೆ ಸಂದೀಪನಿಗೆ ಮನೆ ಊಟ ನೆನಪಾಯಿತು. ಮಧ್ಯೆ ಮಧ್ಯೆ ಬಿಕ್ಕಳಿಸುತ್ತಾ,